ಸಾಹಿತ್ಯದ ಜತೆ ತುಲನೆ ಮಾಡುತ್ತಾರೆ. ಹೀಗೆ ಟಿ.ಆರ್. ಚಂದ್ರಶೇಖರ್, ಡಾ.ಚಂದ್ರಪೂಜಾರಿ ಅವರು ಆರ್ಥಿಕ ಸಂಗತಿಗಳನ್ನು ಕರ್ನಾಟಕದ ಜತೆ ಹೋಲಿಕೆ ಮಾಡಿ ಬೊಜ್ಜಾ ತಾರಕಂ ಅವರ 'ಎಸ್ಸಿ ಎಸ್ಟಿ ಅನುದಾನ ಹಂಚಿಕೆ ವಾಪಾಸಾತಿ' ಮತ್ತು ಪ್ರೊ.ಎಸ್. ಸಿಂಹಾದ್ರಿ ಅವರ 'ಜಾತಿ ನೆರಳಲ್ಲಿ ಅಭಿವೃದ್ಧಿ ರಾಜಕೀಯ' ಕೃತಿಗಳ ಕುರಿತು ಬರೆಯುತ್ತಾರೆ. ಹೀಗೆ ಸುಜ್ಞಾನಮೂರ್ತಿಗಳ ಅನುವಾದಗಳು ಕನ್ನಡದ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ಸಂಗತಿಗಳನ್ನು ತೌಲನಿಕವಾಗಿ ಪರೀಕ್ಷಿಸುವಂತೆ ಮಾಡಿವೆ. ಇದೊಂದು ಮಹತ್ವದ ಸಂಗತಿ. ಕಾರಣವೆಂದರೆ ನೆರೆಯ ಭಾಷೆಗಳಾದ ತಮಿಳು, ಮಲಯಾಳಂ, ಮರಾಠಿ ಭಾಷಿಕ ಪರಿಸರದ ಜತೆ ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಪರಂಪರೆಯನ್ನು ತೌಲನಿಕವಾಗಿ ಪರಿಶೀಲಿಸುವಷ್ಟು ವಿಪುಲ ಅನುವಾದಗಳು ಇಲ್ಲದಿರುವ ಗೈರುಹಾಜರಿ ಎದ್ದು ಕಾಣುತ್ತದೆ.

ಸುಜ್ಞಾನಮೂರ್ತಿ ಅವರ ಎಲ್ಲಾ ಅನುವಾದಗಳಲ್ಲಿ ಚಳವಳಿ-ಹೋರಾಟದ ಎಳೆಗಳು ಹಾಸುಹೊಕ್ಕಾಗಿವೆ. ಇದನ್ನು ಇನ್ನಷ್ಟು ನಿರ್ದಿಷ್ಟವಾಗಿ ಹೇಳುವುದಾದರೆ, ರೈತ, ಆದಿವಾಸಿ ಬುಡಕಟ್ಟು, ಮಹಿಳೆ, ದಲಿತ, ವಿದ್ಯಾರ್ಥಿ ಚಳವಳಿಗಳ ಭೂತ, ವರ್ತಮಾನ ಮತ್ತು ಭವಿಷ್ಯದ ಬಗೆಗಿನ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಹಾಗಾಗಿ ಈ ಮೇಲಿನ ಎಲ್ಲಾ ಚಳವಳಿಗಳ ತಿಳಿವಳಿಕೆಯನ್ನು ವಿಸ್ತರಿಸುತ್ತ ಪರೋಕ್ಷವಾಗಿ ಈ ಚಳವಳಿಗಳ ಸಂಗಾತಿಯೂ ಆಗಿದ್ದಾರೆ. ಈ ಮೂಲಕ ಕನ್ನಡದಲ್ಲಿ 'ಸಬಾಲ್ಟ್ರನ್' ಚಿಂತನೆಯನ್ನು ಬೆಳೆಸಲು ಮೂರ್ತಿ ಅವರ ಅನುವಾದಗಳು ನೆರವಾಗಿವೆ. ಮಾರ್ಕ್ಸ್‌ವಾದ, ಮಹಿಳಾವಾದ, ಅಂಬೇಡ್ಕರ್‌ವಾದಗಳ ಕುರುಡು ಆರಾಧನೆಯ ಕೃತಿಗಳನ್ನು ಅನುವಾದಿಸಿಲ್ಲ, ಬದಲಾಗಿ ಈ ವಾದಗಳ ಬಗೆಗಿನ ವಿಮರ್ಶಾತ್ಮಕ ಅಂತರ ಕಾಯ್ದುಕೊಂಡ ಕೃತಿಗಳನ್ನು ಕನ್ನಡಕ್ಕೆ ತಂದಿದ್ದಾರೆ. ಈ ಮೂಲಕ ಎಲ್ಲಾ ಬಗೆಯ ಶೋಷಣೆ ಮುಕ್ತವಾದ ಮನುಷ್ಯ ಘನತೆಯ ಬದುಕು ಸಾಧ್ಯವಾಗಲಿ ಎನ್ನುವುದು ಅನುವಾದಗಳ ಕನಸಾಗಿದೆ.

ಮೂರ್ತಿಯವರು ವಿಶ್ವವಿದ್ಯಾಲಯದ ಒಳಗಿದ್ದೂ, ಕಂಚಾ ಐಲಯ್ಯ ಅವರ 'ಇಂಟಲೆಕ್ಚವಲ್ ಗೂಂಡಾಗಳು', 'ವಿಶ್ವವಿದ್ಯಾಲಯಗಳಲ್ಲಿ ಜ್ಯೋತಿಷ್ಯದ ಗೆದ್ದಲು' ಮುಂತಾದ ಕೃತಿಗಳನ್ನು ಅನುವಾದಿಸುವಾಗ ಸ್ವತಃ ತಾನಿರುವ ವಿಶ್ವವಿದ್ಯಾಲಯದ ಅಧ್ಯಾಪಕರ ಜಡತೆಯನ್ನು ಜಾಡಿಸುವ ಅಪೇಕ್ಷೆಯೂ ಗುಪ್ತವಾಗಿ ಅಡಗಿದಂತಿದೆ. ಒಟ್ಟಾರೆ ಬಹುತ್ವ ಭಾರತದ ಸಾಕ್ಷ್ಯಗಳನ್ನು ಅನುವಾಗಳ ಮೂಲಕ ನೀಡಿದ್ದಾರೆ. ಕೇರಳದ ದಲಿತ ಹೋರಾಟಗಾರ ಅಯ್ಯನ್ ಕಾಳಿ ಮತ್ತು ಆದಿವಾಸಿಗಳನ್ನು ಸಂಘಟಿಸಿದ ಸಿ.ಕೆ. ಜಾನು, ಮಾನವ ಹಕ್ಕುಗಳ ಹೋರಾಟಗಾರ ಈಚರ್ ವಾರಿಯರ್, ತಮಿಳುನಾಡಿನ ಬೌದ್ಧ ಚಳವಳಿಗಾರ ಅಯೋತಿದಾಸ್ ಮತ್ತು ಪೆರಿಯಾರ್, ಆಂಧ್ರದ `ಕೊಮರಂ ಭೀಮು' ಈ ಹೋರಾಟಗಾರರ ಕೃತಿಗಳ ಮೂಲಕ ದ್ರಾವಿಡ ಸಂಸ್ಕೃತಿಯ ಹೋರಾಟ ಮತ್ತು ವೈಚಾರಿಕತೆಯನ್ನು ಕನ್ನಡ ಸಂಸ್ಕೃತಿಗೆ ಕಸಿ ಮಾಡುವ ಕೆಲಸವನ್ನು ಸುಜ್ಞಾನಮೂರ್ತಿಗಳು ಮಾಡಿದ್ದಾರೆ.

ಸುಜ್ಞಾನಮೂರ್ತಿ ಅವರು ಅನುವಾದಿಸಿದ ಎಲ್ಲಾ ಪುಸ್ತಕಗಳಿಗೂ 'ಅನುವಾದಕನ ಅರಿಕೆ' ಎಂಬ ಪುಟ್ಟದಾದ ಪ್ರವೇಶಿಕೆ ಬರೆದಿದ್ದಾರೆ. ಈ ಪ್ರವೇಶಿಕೆಯಲ್ಲಿ ಅನುವಾದಿತ ಕೃತಿಯನ್ನು ಸೂಕ್ಷ್ಮವಾಗಿ ಪರಿಚಯಿಸಿ, ಅದರ ಮಹತ್ವವನ್ನು ತಿಳಿಸಿ, ಆ ಕೃತಿಯು ಕನ್ನಡಕ್ಕೆ ಏಕೆ ಬೇಕು ಎನ್ನುವ ಸ್ಪಷ್ಟತೆಯನ್ನು ಕೊಡುತ್ತಾರೆ. ಈ ಅರಿಕೆಗಳನ್ನು ಗಮನಿಸಿದರೆ ಮೂರ್ತಿಯವರು ಕೇವಲ ಯಾಂತ್ರಿಕ ಅನುವಾದಕರಲ್ಲ, ಬದಲಿಗೆ ಪ್ರಖರ ವೈಚಾರಿಕ ಸ್ಪಷ್ಟತೆ ಇರುವ, ಆಯಾ ವಿಷಯಗಳ ಬಗ್ಗೆ ಸೂಕ್ಷ್ಮ ಒಳನೋಟಗಳಿರುವ ತಜ್ಞರು ಎನ್ನುವುದು ತಿಳಿಯುತ್ತದೆ. ಪೆರಿಯಾರ್ ಅವರ 'ದಿಟ ರಾಮಾಯಣ'ದ ಅರಿಕೆಯಲ್ಲಿ 'ನಮ್ಮಲ್ಲೊಂದು ವೈಚಾರಿಕ ವಿವೇಕ ಸೃಷ್ಟಿಸುವ, ಪುರಾಣ ಮತ್ತು ಚರಿತ್ರೆಯನ್ನು ಗ್ರಹಿಸಲು ನಿಖರ ದೃಷ್ಟಿಕೋನವನ್ನು ನೀಡುವ ಈ ಕೃತಿ ಕನ್ನಡದ ಸಂದರ್ಭದಲ್ಲಿ ಮಹತ್ವವಾದುದು ಎಂದು ನಂಬಿದ್ದೇನೆ' ಎನ್ನುತ್ತಾರೆ.

ತೆಲುಗಿನ ಲೇಖಕಿ ಓಲ್ಗಾ ಅವರ 'ಸ್ತ್ರೀವಾದಿ ಅರಿವಿನ ಹಾದಿ' ಕೃತಿಯ ಆರಂಭಕ್ಕೆ 'ರಚನೆ ಮತ್ತು ಆಲೋಚನಾ ವಿಧಾನಗಳಲ್ಲಿ ತೀರಾ ಭಿನ್ನವೆನಿಸುವ ಈ ಕೃತಿಯನ್ನು ಕನ್ನಡದ ಅರಿವಿನ ಹಾದಿಗಳು ಮತ್ತಷ್ಟು ವಿಸ್ತರಿಸಲಿ ಎಂಬ ಮಹದಾಸೆಯಿಂದ ಕನ್ನಡಕ್ಕೆ ಇದನ್ನು ಅನುವಾದಿಸಿದ್ದೇನೆ' ಎನ್ನುತ್ತಾರೆ. ತೆಲಂಗಾಣ